ದಿನಾಂಕ:28.6.2002 ರಂದು ಪ್ರಾರಂಭಿಸಲಾಗಿದೆ. ಡಿಸೆಂಬರ್ 2003ರ ಒಳಗಾಗಿ ಪೂರ್ಣಗೊಳಿಸಲಾಗುವುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅಕ್ರಮ ಕಟ್ಟಡಗಳು

1585(1362) ಶ್ರೀ ಗುರುಸ್ವಾಮಿ ಎಸ್ (ಚಾಮುಂಡೇಶ್ವರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಆಸ್ತಿಯಲ್ಲಿ 2001-2002ನೇ ಸಾಲಿನಲ್ಲಿ ನಿರ್ಮಾಣ ಮಾಡಲಾಗಿರುವ ಅಕ್ರಮ ಕಟ್ಟಡಗಳು ಎಷ್ಟು; ಅವು ಯಾವುವು;

ಆ) ಈ ಆಸ್ತಿಯನ್ನು ಮರಳಿ ವಶಕ್ಕೆ ಪಡೆಯಲು ಕೈಗೊಂಡಿರುವ ಕ್ರಮವೇನು;

ಇ) ಧ್ವಂಸ ಮಾಡಲಾಗಿರುವ ಕಟ್ಟಡಗಳೆಷ್ಟು ಮತ್ತು ಈ ರೀತಿ ಮರುಕಳಿಸಿದಂತೆ ಕೈಗೊಂಡಿರುವ ಕ್ರಮಗಳೇನು?

ಈ) ಈ ನಗರ ಯೋಜನಾ ಪ್ರಾಧಿಕಾರದ ಅನುಮತಿ ಪಡೆಯದೇ ನಿರ್ಮಾಣ ಗೊಂಡಿರುವ ಕಟ್ಟಡಗಳು ಯಾವುವು, ಅದನ್ನು ಸಕ್ರಮಗೊಳಿಸಲು ಕೈಗೊಂಡಿರುವ ಕ್ರಮಗಳೇನು;

ಉ) ಸಕ್ರಮಾತಿಯಲ್ಲಿ ವಸೂಲು ಮಾಡಲಾದ ದಂಡ ಎಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ 2001-2002ನೇ ಸಾಲಿನಲ್ಲಿ ಯಾವುದೇ ಅಕ್ರಮ ಕಟ್ಟಡಗಳು ನಿರ್ಮಾಣವಾಗಿರುವುದು ಈ ಪ್ರಾಧಿಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಕಳೆದ 21/2 ವರ್ಷಗಳ ಅವಧಿಯಲ್ಲಿ 732 ಅಕ್ರಮ ಕಟ್ಟಡಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನೆಲಸಮ ಮಾಡಲಾಗಿದೆ. ಈ ಕಟ್ಟಡಗಳು ಕಳೆದ 3 ವರ್ಷಗಳ ಮೇಲ್ಪಟ್ಟು ಕಟ್ಟಲ್ಪಟ್ಟಿರುತ್ತವೆ. ಹಾಗೂ ನೆಲಸಮ ಮಾಡುವ ಪ್ರಕ್ರಿಯೇ ಅನಧಿಕೃತ ಕಟ್ಟಡಗಳ ನಿರ್ಮಾಣಗಳನ್ನು ತಡೆಯುವ ಕ್ರಮವಾಗಿದೆ. ಇದರ ಜೊತೆಗೆ ಭೂಗಳ್ಳರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗಿದೆ.

ಈ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ವಿಭಾಗವು ಯಾವುದೇ ಕಟ್ಟಡಗಳ ನಕ್ಷೆಯನ್ನು ಮಂಜೂರು ಮಾಡುವುದಿಲ್ಲ.

ಉ) ಅನ್ವಯಿಸುವುದಿಲ್ಲ.

ಮೈಸೂರು ನಗರ ಪಾಲಿಕೆ ಕಾರ್ಯನಿರ್ವಹಣೆ

1586 (1863) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಪಾಲಿಕೆಯಲ್ಲಿ 11-10-1999 ರಿಂದ ತಹಲ್‌ವರೆಗೆ ಎಷ್ಟು ಜನ ಅಧಿಕಾರಿಗಳು ಯಾವ ಯಾವ ಅವಧಿಯಿಂದ ಕೆಲಸ ಮಾಡುತ್ತಿದ್ದಾರೆ; ಅವರಲ್ಲಿ ಪ್ರತಿನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವವರು ಯಾರು?

ಆ) ಕೆಲವು ಆರೋಗ್ಯ ಅಧಿಕಾರಿ ಇನ್ಸ್‌ಪೆಕ್ಟರ್‌ಗಳ ಮೇಲೆ ದೂರುಗಳು ಬಂದಿದ್ದರೂ

ಸಹ ಅವರನ್ನು ವರ್ಗಾಯಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಅವರ ವಿರುದ್ಧ ಕೈಗೊಂಡಿರುವ ಕ್ರಮವೇನು?

ಈ) ಇವರುಗಳಲ್ಲಿ ಇಲಾಖಾ ವಿಚಾರಣೆ ಎದುರಿಸುತ್ತಿರುವವರು ಹಾಗೂ ಲೋಕಾಯುಕ್ತದ ಬಲೆಗೆ ಸಿಲುಕಿರುವವರು ಇದ್ದಾರೆಯೇ? ಅಮಾನತ್ತಿನಲ್ಲಿ ಇರುವವರು ಯಾರು? ಎಷ್ಟು ದಿನಗಳಿಂದ ಅಮಾನತ್ತಿನಲ್ಲಿದ್ದಾರೆ?

ಉ) ಇವರುಗಳ ಮೇಲಿರುವ ಪ್ರಕರಣವನ್ನು ಮುಕ್ತಾಯಗೊಳಿಸಲು ಅಥವಾ ಶಿಕ್ಷೆಗೊಳಿಸಲು ಕೈಗೊಂಡಿರುವ ಕ್ರಮವೇನು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) ವಿವರವನ್ನು ಅನುಬಂಧ 1 ರಲ್ಲಿ ನೀಡಲಾಗಿದೆ.

ಆ) ಆರೋಗ್ಯಾಧಿಕಾರಿ, ಇನ್ಸ್‌ಪೆಕ್ಟರ್‌ಗಳ ಪೈಕಿ ಲೋಕಾಯುಕ್ತದ ಬಲೆಗೆ ಸಿಕ್ಕಿರುವವರು ಹೊರತುಪಡಿಸಿ ಉಳಿದಂತೆ ದೂರುಗಳು ಬಂದಿರುವುದಿಲ್ಲ.

ಇ) (ಆ) ಉತ್ತರದಿಂದ ಉದ್ಭವಿಸುವುದಿಲ್ಲ.

ಈ) ಲೋಕಾಯುಕ್ತದ ಬಲೆಗೆ ಸಿಲುಕಿರುವವರ ವಿವರಗಳು ಇಂತಿವೆ.

1) ಶ್ರೀಧರ್, ಕಿರಿಯ ಆರೋಗ್ಯ ಪರಿವೀಕ್ಷಕರು, ಇವರು ದಿನಾಂಕ : 30-9-1990ರಲ್ಲಿ ಲೋಕಾಯುಕ್ತದ ಬಲೆಗೆ ಸಿಕ್ಕಿಬಿದ್ದು ಇವರ ವಿರುದ್ಧ ಲೋಕಾಯುಕ್ತದ ವಿಚಾರಣೆ ಪೂರ್ಣಗೊಂಡಿರುವುದಿಲ್ಲ.

2) ಎ.ಕೆ. ಬಾಲಚಂದ್ರ, ಕಿರಿಯ ಆರೋಗ್ಯ ಪರಿವೀಕ್ಷಕರು, ಇವರು ದಿನಾಂಕ 10-1-2001 ರಲ್ಲಿ ಲೋಕಾಯುಕ್ತದ ಬಲೆಗೆ ಸಿಕ್ಕಿಬಿದ್ದು, ಇವರ ವಿರುದ್ಧ ಲೋಕಾಯುಕ್ತದ ವಿಚಾರಣೆ ಪೂರ್ಣಗೊಂಡಿರುವುದಿಲ್ಲ.

ಇವರಿಬ್ಬರು ಲೋಕಾಯುಕ್ತದ ತನಿಖೆ ಸಮಯದಲ್ಲಿ ಅಮಾನತ್ತಿನಲ್ಲಿದ್ದು ಪ್ರಸ್ತುತ ಅಮಾನತ್ತನ್ನು ತೆರವುಗೊಳಿಸಲಾಗಿದೆ. ಇವರಿಬ್ಬರು ನಗರಪಾಲಿಕೆಯ ನೌಕರರಾಗಿರುತ್ತಾರೆ.

ಉ) ಮಾನ್ಯ ಲೋಕಾಯುಕ್ತದವರು ದಾಖಲಿಸಿರುವ ಮೊಕದ್ದಮೆಗಳ ಮೇಲೆ ನ್ಯಾಯಾಲಯದ ಆದೇಶ ಒಂದನಂತರ ಆದೇಶದ ಅನುಸಾರ ಕ್ರಮ ವಹಿಸಲಾಗುವುದು.

ಅನುಬಂಧ-1

ಕ್ರಮ ಸಂಖ್ಯೆ	ಅಧಿಕಾರಿ:ನೌಕರರ ಹೆಸರು	ಹುದ್ದೆ	ಕರ್ತವ್ಯಕ್ಕೆ ಹಾಜರಾದ ದಿನಾಂಕ
1)	ಡಾ॥ ಟಿ.ಎಸ್. ನಾಗರಾಜು	ಆರೋಗ್ಯಾಧಿಕಾರಿಗಳು	27-09-2001
2)	ಶ್ರೀ ರಘುನಾಥ್	ಹಿರಿಯ ಆರೋಗ್ಯ ಪರಿವೀಕ್ಷಕರು	16-11-1996
3)	ಶ್ರೀ ಎ.ಕೆ. ಬಾಲಚಂದ್ರ	ಕಿರಿಯ ಆರೋಗ್ಯ ಪರಿವೀಕ್ಷಕರು	04-07-1997
4)	ಶ್ರೀ ಜಿತೇಂದ್ರಕುಮಾರ್	" "	24-01-1996
5)	ಶ್ರೀ ಶ್ರೀಧರ್	" "	16-01-1981
6)	ಶ್ರೀ ಚಿಕ್ಕಜವರಪ್ಪ	" "	04-07-1987

ಕ್ರಮ ಸಂಖ್ಯೆ	ಅಧಿಕಾರಿ:ನೌಕರರ ಹೆಸರು	ಹುದ್ದೆ	ಕರ್ತವ್ಯಕ್ಕೆ ಹಾಜರಾದ ದಿನಾಂಕ
7)	ಶ್ರೀ ಜಿ. ಸಿದ್ದೇಗೌಡ	ಕಿರಿಯ ಆರೋಗ್ಯ ಪರಿವೀಕ್ಷಕರು	06-09-1990
8)	ಶ್ರೀ ಸಂಪತ್‌ಕುಮಾರ್	" "	06-09-1990
9)	ಡಾ।। ಟಿ.ಕೆ. ರಂಗಸ್ವಾಮಿ	ಉಪ ಆರೋಗ್ಯ ಅಧಿಕಾರಿ	19-12-2001
10)	ಶ್ರೀ ಕಾಂತರಾಜು	ಕಿರಿಯ ಆರೋಗ್ಯ ಪರಿವೀಕ್ಷಕರು	13-05-1997
11)	ಶ್ರೀ ಶಿವಕುಮಾರ್	"	16-08-1997
12)	ಶ್ರೀ ಎಂ. ರಾಮಚಂದ್ರಯ್ಯ	"	16-01-2001
13)	ಶ್ರೀ ಬಿ.ಟಿ. ಸಂಜೀವಯ್ಯ	"	24-12-1999
14)	ಶ್ರೀ ಶಿವಮಾದು	"	21-07-2001
15)	ಶ್ರೀ ಸದಾಶಿವರಾವ್	"	01-02-1997
16)	ಶ್ರೀ ಶ್ರೀಕಂಠಯ್ಯ	"	30-04-1997
17)	ಶ್ರೀ ಎಂ. ಕೃಷ್ಣಪ್ಪ	"	23-05-1998
18)	ಶ್ರೀ ನಾಗರಾಜಯ್ಯ	"	17-06-1996
19)	ಶ್ರೀ ಬಿ. ಬಸವರಾಜು	"	23-10-2000
20)	ಶ್ರೀ ಮುನಿಯಪ್ಪ	"	27-05-1999
21)	ಶ್ರೀ ಬೋಜರಾಜು	"	10-06-1997
22)	ಶ್ರೀ ನಂಜಪ್ಪಗೌಡ	"	25-07-2000
23)	ಶ್ರೀ ಧನಂಜಯ	"	04-07-2002
24)	ಶ್ರೀ ಚಿಲುವಯ್ಯ	"	20-08-1998
25)	ಶ್ರೀ ರಾಮನರಸಯ್ಯ	"	27-05-1998
26)	ಶ್ರೀ ಬಿ.ಎಸ್. ರಾಮಸ್ವಾಮಿ	ಹಿರಿಯ ಆರೋಗ್ಯ ಪರಿವೀಕ್ಷಕರು	14-07-1998
27)	ಶ್ರೀ ಸೂರ್ಯನಾರಾಯಣ	"	31-10-2000

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಕುರಿತು

1587 (1864) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 11.10.1999 ರಿಂದ 31.3.2002ರವರೆಗೆ ಬೆಂಗಳೂರು ಜಲ ಮಂಡಲಿಯಿಂದ ಕಾನೂನು ಬಾಹೀರವಾಗಿ ಮಾಡಲಾಗಿರುವ ಹೆಚ್ಚುವರಿ ವೆಚ್ಚ ಎಷ್ಟು?